ಓ.ಎಸ್. ನಂ. 48/2023
ಪಿ.ಡಬ್ಲ್ಯೂ- 1

(ಇಂದು ದಿಃ 07-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
**ಪಾಟೀ ಸವಾಲು :- ಶ್ರೀ. RAG ವಕೀಲರಿಂದ :-**

ನನ್ನ ತಂದೆಗೆ 3 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳು. ಅವುರುಗಳೆಂದರೆ ಸುದರ್ಶನರೆಡ್ಡಿ, ಜಗಮೋಹನರೆಡ್ಡಿ, ಸೌಬ್ಯಾಗ್ಯಲಕ್ಷ್ಮಿ, ವಾದಿ, ವಿಜಯಲಕ್ಷ್ಮಿ ಮತ್ತು ಪದ್ಮ. ಇವರ ಪೈಕಿ ವಿಜಯಲಕ್ಷ್ಮಿ ತೀರಿಹೋಗಿದ್ದಾರೆ. ಈ ದಾವೆಯಲ್ಲಿ ವಿಜಯಲಕ್ಷ್ಮಿ ಮಕ್ಕಳು ಪಾರ್ಟಿ ಇದ್ದಾರೆ. ನನ್ನ ತಂದೆ ಬದುಕಿದ್ದಾಗನ ನಾವು 3 ಜನ ಅಣ್ಣ-ತಮ್ಮಂದಿರು ಬೇರೆಯಾಗಿದ್ದೆವೆ. ವಿಭಾಗ ಪತ್ರದ ಮೂಲಕ ವಿಭಾಗ ಆಗಿದ್ದೆವೆ. ವಿಭಾಗ ಪತ್ರದ ಒಂದು ಪ್ರತಿ ನನ್ನ ಬಳಿ ಇದೆ . ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.ನಾವು 3 ಜನರಿಗೆ ಸೇರಿಸಿ ಒಟ್ಟು 135 ಎಕರೆ ಜಮೀನು ಇತ್ತು. ಸದರಿ ವಿಭಾಗ ಆಗುವಾಗ ಸೌಭಾಗ್ಯ ಲಕ್ಷ್ಮಿಗೆ ಸರ್ವೆ ನಂ 413 ರಲ್ಲಿ 13 ಗುಂಟೆ, 408 ರಲ್ಲಿ 2 ಎಕರೆ, 295 ರಲ್ಲಿ 14 ಎಕರೆ ಜಮೀನು ಕೊಟ್ಟಿದ್ದೆವು. ಉಳಿದ ಇಬ್ಬರು ಸಹೋದರಿಯರಿಗೆ ಜಮೀನುಗಳನ್ನು ಕೊಟ್ಟಿಲ್ಲ. ಸೌಭಾಗ್ಯ ಲಕ್ಷ್ಮಿಗೆ ಮುಧೋಳ ಗ್ರಾಮದ ಮೇಲಿನ ಸರ್ವೆ ನಂಬರ ಸ್ವತ್ತುಗಳನ್ನು ಕೊಟ್ಟಿದ್ದೆವು. ನಾವು 3 ಜನ ಬೇರೆಯಾಗುವಾಗ ಮುಧೋಳದಲ್ಲಿ 130 ಎಕರೆ ಜಮೀನು ಇತ್ತು, ಯಕಮ್ಮೆ ಗ್ರಾಮದಲ್ಲಿ 37 ಎಕರೆ ಜಮೀನು ಇತ್ತು.ಯಕಮ್ಮೆನಲ್ಲಿ ನನ್ನ ತಂದೆಗೆ ಸೇರಿದ 110 ಎಕರೆ ಜಮೀನು ಇತ್ತು. ನಾವು ತೆಲಗಾಂಣ ರಾಜ್ಯದಲ್ಲಿ ಭೂಸುಧಾರಣೆ ಕಾಯ್ದೆ ಅಡಿ Disclaration Form ಭರ್ತಿ ಮಾಡಿದಾಗ ನಾರಾಯಣರೆಡ್ಡಿ ಮತ್ತು ಭಿಚ್ಚಮ್ಮಳ ಹೆಸರಿನಲ್ಲಿ 136 ಎಕರೆ ಜಮೀನು ತೋರಿಸಿದರು ಎಂದರೆ ಸರಿಯಲ್ಲ.

ಸುದರ್ಶನ ರೆಡ್ಡಿ ತಾಂಡೂರದಲ್ಲಿ ಶಿಕ್ಷಣ ಪಡೆದಿದ್ದಾರೆ. ಜಗಮೋಹನರೆಡ್ಡಿ ಮತ್ತು ನಾನು ಮುಧೋಳದಲ್ಲಿ ಶಿಕ್ಷಣ ಪಡೆದಿದ್ದೇವೆ. ನಾನು PUC ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ವಿದ್ಯಾಬ್ಯಾಸ ಮಾಡುವಾಗ ನಾನು ಮುದೋಳದಲ್ಲಿರುವ ನನ್ನ ಸೋದರಮಾವ ವೆಂಕಟರಾಮರೆಡ್ಡಿ ರವರ ಮನೆಯಲ್ಲಿ ಇರುತ್ತಿದ್ದೆ. ಸುದರ್ಶನ ರೆಡ್ಡಿ ಮತ್ತು ಸೌಭಾಗ್ಯ ಲಕ್ಷ್ಮಿರವರ ಮದುವೆಗಳು 1977 ರಲ್ಲಿ ಒಂದೇ ದಿನ ಮುಧೋಳದಲ್ಲಿ ಆಗಿದ್ದವು ಎಂದರೆ ಸರಿ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.